ಮುಖ್ಯ ಕಾರ್ಯದರ್ಶಿ
CHIEF SECRETARY
GOVERNMENT OF KARNATAKA

ವಿಧಾನಸೌಧ, ಬೆಂಗಳೂರು - ೫೬೦ ೦೦೧
VIDHANA SOUDHA, BANGALORE - 560 001.

ಮುಕಾ: 496: 2003
D.O. NO.

ದಿನಾಂಕ DATED 05-07-03

ಅತಿ ತುರ್ತು

## ಸುತ್ತೋಲೆ

ವಿಷಯ: ಅಕ್ಷರ ದಾಸೋಹ ಯೋಜನೆಯ ಆಹಾರ ಗುಣಮಟ್ಟದ ಪರಿಶೀಲನೆಯ ಬಗ್ಗೆ - ಸೂಚನೆಗಳು

ಶಾಲಾ ಮಕ್ಕಳಿಗೆ ಒದಗಿಸುತ್ತಿರುವ ಮಧ್ಯಾಹ್ನದ ಬಿಸಿಯೂಟದ ಗುಣಮಟ್ಟದ ಬಗ್ಗೆ ಹಾಗೂ ಇದನ್ನು ಸೇವಿಸಿದ ನಂತರ ಶಾಲಾ ಮಕ್ಕಳು ಅಸ್ವಸ್ಥಗೊಳ್ಳುತ್ತಿರುವ / ತೊಂದರೆಗೊಳಗಾಗುತ್ತಿರುವ ಪ್ರಸಂಗಗಳ ವರದಿಗಳು ಬರುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರವು ಈ ಬಗ್ಗೆ ತನ್ನ ತೀವ್ರ ಕಳವಳ ವ್ಯಕ್ತಪಡಿಸುತ್ತದೆ. ಮುಂದೆ ಈ ರೀತಿಯ ಪ್ರಸಂಗಗಳನ್ನು ತಪ್ಪಿಸಲು ದಿನಾಂಕ 7ನೇ ಜುಲೈ 2003 ಸೋಮವಾರದಿಂದ ಪ್ರಾರಂಭಗೊಳ್ಳುವಂತೆ, ಎಲ್ಲಾ ಪ್ರಾಥಮಿಕ ಶಾಲೆಗಳು ಕೆಳಕಂಡ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸಲು ಸೂಚಿಸಲಾಗಿದೆ.

1. ಈಗಾಗಲೇ ನೀಡಿರುವ ನಿರ್ದೇಶನದಂತೆ ಗ್ರಾಮದ ಸಂಬಂಧಪಟ್ಟ ಪ್ರಾಧಿಕಾರವು ಆಹಾರ ತಯಾರು ಮಾಡುವುದನ್ನು ಪ್ರತಿದಿನವೂ ಮೇಲ್ವಿಚಾರಣೆ ಮಾಡಬೇಕು
2. ಆಹಾರವು ಶಾಲೆಗೆ ಬಂದ ಮೇಲೆ, ಮುಖ್ಯೋಪಾಧ್ಯಾಯರು ಹಾಗೂ ಒಂದರಿಂದ ಐದನೇ ತರಗತಿಯ ಅಧ್ಯಾಪಕರು ಆಹಾರದ ಗುಣಮಟ್ಟ, ರುಚಿ ಇತ್ಯಾದಿಗಳನ್ನು ಪ್ರತಿದಿನ, ಪ್ರತಿಸಲವು ಸ್ವತಃ ಪರೀಕ್ಷಿಸಿ, ಸ್ವೀಕೃತವಾಗಿರುವ ಆಹಾರವು ಒಳ್ಳೆಯ ಗುಣಮಟ್ಟದಿಂದ ಕೂಡಿದೆ, ಯಾವುದೇ ಸೋಂಕಿನ ವಸ್ತು ಒಳಗೊಂಡಿಲ್ಲ ಹಾಗೂ ಆಹಾರವು ಸಂಪೂರ್ಣವಾಗಿ ಬೇಯಿಸಿ ತಿನ್ನಲು ಯೋಗ್ಯವಾಗಿದೆ ಎಂಬುದಾಗಿ ದೃಢೀಕರಿಸಬೇಕು
3. ಎಲ್ಲಾ ಶಾಲೆಯ ಮುಖ್ಯೋಪಾಧ್ಯಾಯರು ಇದಕ್ಕಾಗಿ ಒಂದು ಪುಸ್ತಕವನ್ನು ನಿರ್ವಹಿಸಿ, ಅದರಲ್ಲಿ ಆಹಾರದ ಬಗ್ಗೆ ಕನಿಷ್ಠ ಇಬ್ಬರು ಅಧ್ಯಾಪಕರು ದೃಢೀಕರಿಸಿದ ಬಗ್ಗೆ ಸಹಿ ಪಡೆಯಬೇಕು.
4. ಈ ಪುಸ್ತಕವು, ಸಂಬಂಧಪಟ್ಟ ಎಲ್ಲಾ ಪ್ರಾಧಿಕಾರದ ತಪಾಸಣೆ ಹಾಗೂ ಪರಿಶೀಲನೆಗೆ ಲಭ್ಯವಿರಬೇಕು. ಈ ಪುಸ್ತಕದ ನಿರ್ವಹಣೆಯು ಆಯಾ ಶಾಲೆಯ ಮುಖ್ಯೋಪಾಧ್ಯಾಯರ ಜವಾಬ್ದಾರಿಯಾಗಿರುತ್ತದೆ.
5. ಒಂದು ವೇಳೆ ಸರಬರಾಜು ಮಾಡಿದ ಆಹಾರದ ಗುಣಮಟ್ಟವು ಕಳಪೆಯಾಗಿದ್ದು, ಮನುಷ್ಯರು ತಿನ್ನಲು ಯೋಗ್ಯವಲ್ಲವೆಂದು ಕಂಡುಬಂದಲ್ಲಿ, ಮುಖ್ಯೋಪಾಧ್ಯಾಯರು ಅಂತಹ ಆಹಾರವನ್ನು ತಿರಸ್ಕರಿಸುವುದು ಹಾಗೂ ಶಾಲಾ ಮಕ್ಕಳಿಗೆ ಇದನ್ನು ವಿತರಿಸಬಾರದು.
6. ಇಂತಹ ತಿರಸ್ಕರಿಸಲ್ಪಟ್ಟ ಆಹಾರದ ಬಗ್ಗೆ ಶಾಲಾ ಪ್ರಾಧಿಕಾರವು ವಿಷಯವನ್ನು ಹತ್ತಿರದ ಕಂದಾಯ ಅಧಿಕಾರಿ / ಜಿಲ್ಲಾ ಪಂಚಾಯತ್ ಅಧಿಕಾರಿ / ತಹಶೀಲ್ದಾರರಿಗೆ ತಿಳಿಸುವುದು.
7. ಮೇಲ್ಕಂಡ ಸೂಚನೆಗಳನ್ನು ಕಡ್ಡಾಯವಾಗಿ ಪಾಲನೆ ಮಾಡದಿರುವಂತಹ ಮುಖ್ಯೋಪಾಧ್ಯಾಯರು/ ಉಪಾಧ್ಯಾಯರುಗಳ ಮೇಲೆ ತೀವ್ರ ಶಿಸ್ತು ಕ್ರಮ ಜರುಗಿಸಲಾಗುವುದು.
8. ಪ್ರಾಥಮಿಕ ಆರೋಗ್ಯ ಕೇಂದ್ರಗಳ ಎಲ್ಲಾ ವೈದ್ಯರು ತಮ್ಮ ವ್ಯಾಪ್ತಿಗೆ ಒಳಪಡುವ, ಮಧ್ಯಾಹ್ನದ ಬಿಸಿಯೂಟ ಕಾರ್ಯಕ್ರಮದನ್ವಯ, ಶಾಲೆಯ ಆಹಾರ ತಯಾರಿಸಲಾಗುವ ಅಡಿಗೆ ಮನೆಯ ಸ್ವಚ್ಛತೆ, ಆರೋಗ್ಯಕರ ವಾತಾವರಣ ಇತ್ಯಾದಿಗಳ ಕುರಿತು ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿ, ಸ್ವಚ್ಛ ಕುಡಿಯುವ ನೀರಿನ ಲಭ್ಯತೆಯ ಬಗ್ಗೆ ಹಾಗೂ ಆಹಾರವನ್ನು ತಯಾರಿಸಲಾಗುತ್ತಿರುವ ಸ್ಥಳದ ಪರಿಸರ, ಅಡುಗೆಯ ಪರಿಕರಗಳು ಉತ್ತಮ ಗುಣಮಟ್ಟದಲ್ಲಿದೆ ಎಂದು ದೃಢೀಕರಿಸುವುದು.

ಬಿ. ಎಸ್. ಪಾಟೀಲ್

(ಬಿ ಎಸ್ ಪಾಟೀಲ್)
ಮುಖ್ಯ ಕಾರ್ಯದರ್ಶಿ

ಎಲ್ಲಾ ಜಿಲ್ಲಾಧಿಕಾರಿಗಳು
ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
ಎಲ್ಲಾ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳು